ಯುಗಧರ್ಮದ ಪರಿಕಾರರು

# ರಾಮಕೃಷ್ಣ-ವಿವೇಕಾನಂದ

ವಿಜಯಕುಮಾರ

**ಶ್ರೀರಾಮಕೃಷ್ಣರ ಆಗಮನ ಕೇವಲ ಧಾರ್ಮಿಕ ಆಂದೋಳನವನ್ನು ಉಂಟು ಮಾಡಿರುವುದು ಮಾತ್ರವಲ್ಲದೆ ಒಂದು ಹೊಸ ಸಾಮಾಜಿಕ ವ್ಯವಸ್ಥೆಗೆ ನಾಂದಿಯಾಗುವ ಹಾಗೂ ಜಗತ್ತಿನ ಚಿಂತನಾಧಾರೆಗೆ ಹೊಸ ತಿರುವನ್ನು ಕೊಡುವ ಸಾಧ್ಯತೆಗಳನ್ನು ಕುರಿತು ಶ್ರೀ ವಿಜಯಕುಮಾರರು ಈ ಲೇಖನದಲ್ಲಿ ಚರ್ಚಿಸಿದ್ದಾರೆ. ಅವರು 'ವಿವೇಕಪ್ರಭ' ಕಾರ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವರು.**

## ಧರ್ಮದ ಅವಿನಾಶತ್ವ

**ಪ್ರಾಚೀನ** ಕಾಲದಿಂದ ವರ್ತಮಾನದವರೆವಿಗೂ ಮನುಕುಲದ ಆಗು-ಹೋಗುಗಳನ್ನು ನಿಯಂತ್ರಿಸುತ್ತಿರುವ ಶಕ್ತಿಗಳಲ್ಲಿ ಅತ್ಯಂತ ಪ್ರಬಲವಾದುದು ಧರ್ಮ ಎಂಬುದು ಸ್ವಾಮಿ ವಿವೇಕಾನಂದರ ಅಭಿಪ್ರಾಯ. ಪ್ರಪಂಚದ ಇತಿಹಾಸದಲ್ಲಿ ನಾಗರೀಕತೆಗಳು ಎದ್ದವು, ಮಣ್ಣು ಪಾಲಾದುವು; ಸಾಮ್ರಾಜ್ಯಗಳು ವೈಭವದಿಂದ ಮೆರೆದು ಇನ್ನಿಲ್ಲದಂತಾದುವು; ದರ್ಪ ಅಟ್ಟಹಾಸದಿಂದ ಮೆರೆದ ರಾಜಾಧಿರಾಜರುಗಳು ಹೇಳಹೆಸರಿಲ್ಲದಂತಾದರು. ಆದರೆ ಜಗತ್ತಿನ ಧರ್ಮಗಳು ಮಾತ್ರ ತಾವು ಬೋಧಿಸುವ ಸತ್ಯದಷ್ಟೇ ಅವಿನಾಶಿಯಾಗಿ ತಮ್ಮಲ್ಲಿನ ಒಂದು ವಿಶೇಷ ಅಂತಸ್ಸತ್ವದಿಂದ ತಮ್ಮ ಅಸ್ತಿತ್ವವನ್ನು ವಿಜೃಂಭಿಸಿವೆ. ಮಾನವನ ಸನಾತನ ಸ್ವಭಾವವನ್ನೇ ಆಧರಿಸಿರುವ ಧರ್ಮದ ನಿತ್ಯಸತ್ಯವನ್ನು ಜಗತ್ತಿಗೆ ಮತ್ತೆ ಮತ್ತೆ ಸಾಬೀತು ಪಡಿಸಲು ಅವತರಿಸಿದ ಮನುಕುಲದ ಶ್ರೇಷ್ಠ ವ್ಯಕ್ತಿಗಳಾದ ಶ್ರೀಕೃಷ್ಣ, ಬುದ್ಧ, ಕ್ರೈಸ್ಟ್, ಚೈತನ್ಯ ಮೊದಲಾಗಿ ಎಲ್ಲ ಮಹಾತ್ಮರೂ ಅವರವರ ಕಾಲದಲ್ಲಿ ಧಾರ್ಮಿಕ ಜಾಗೃತಿಯಿಂದ ಕ್ರಾಂತಿಯ ಅಲೆಗಳನ್ನೇ ಎಬ್ಬಿಸಿ ಜಗತ್ತಿನ ಇತಿಹಾಸದಲ್ಲಿ ಧ್ರುವತಾರೆಗಳಂತೆ ಬೆಳಗುತ್ತಿದ್ದಾರೆ. ಇವರೆಲ್ಲರೂ ತಮ್ಮ ಕಾಲದ ಆವಶ್ಯಕತೆಗಳನ್ನು ಅರಗಿಸಿಕೊಂಡು ಆ ಆವಶ್ಯಕತೆಗಳಿಗನುಗುಣವಾಗಿ ರೂಪುಗೊಂಡವರಾಗಿರುತ್ತಾರೆ. ಕುವೆಂಪುರವರು ತಮ್ಮ ಒಂದು ಸೊಗಸಾದ ಉಕ್ತಿಯಲ್ಲಿ ಹೇಳುವಂತೆ **'ಜನಮನದ ಶಕ್ತಿ ಮೇಣವರಭೀಪ್ಸೆಯೆ ಮಹಾತ್ಮರಂ ನಮ್ಮಿಳೆಗೆ ತಪ್ಪದೆಳೆತರ್ಪುದು.'**

## ನವಯುಗಧರ್ಮ

೧೯ನೆ ಶತಮಾನದ ಪೂರ್ವಾರ್ಧ ಜಗತ್ತಿನ ಇತಿಹಾಸದಲ್ಲಿ ಒಂದು ಸಂಕ್ರಮಣ ಘಟ್ಟವೇ ಆಗಿತ್ತು. ಪಾಶ್ಚಾತ್ಯ ಪ್ರಪಂಚವನ್ನೆಲ್ಲಾ ತಲ್ಲಣಿಸುವಂತೆ ಮಾಡಿದ ರಾಜಕೀಯ ಕ್ರಾಂತಿಗಳು, ವಿಶ್ವದ ಜೀವನ ಸ್ಥಿತಿಯನ್ನು ಮಾರ್ಪಡಿಸಿದ ಕೈಗಾರಿಕಾ ಕ್ರಾಂತಿ, ವೈಜ್ಞಾನಿಕ ಮತ್ತು ತಾಂತ್ರಿಕ ಸಾಧನೆಗಳಿಂದ ಹೊಸಕಾರ್ಯಸಾಧನೆಯ ಕ್ರಮ ಗಳನ್ನು ಕಂಡುಹಿಡಿಯುವ ಬುದ್ಧಿ ಕೌಶಲ್ಯ, ಇದರೊಟ್ಟಿಗೇನೆ ನೆಲಗಟ್ಟಿನಿಂದ ಕುಸಿಯ ತೊಡಗಿದ್ದ ಮಧ್ಯಕಾಲದ ಸಾಂಪ್ರದಾಯಿಕ ನಂಬಿಕೆಗಳು, ಮೌಲ್ಯಗಳು, ಆದರ್ಶಗಳು— ಈ ಎಲ್ಲ ಪರಸ್ಪರ ವಿರುದ್ಧವೆನಿಸುವ ಬೆಳೆವಣಿಗೆಗಳು ಆಧುನಿಕ ಯುಗದಲ್ಲಿ ಜಗತ್ತಿನ ಧರ್ಮಗಳಿಗೆ ಒಂದು ಹೊಸ ಸವಾಲನ್ನೇ ಒಡ್ಡಿದ್ದವು. ಇವು ಭಾರತದ ಮೇಲೂ ಧಾಳಿಯಿಟ್ಟವು. ಇದರಿಂದ ಭಾರತೀಯ ಸಾಮಾಜಿಕ ಜೀವನದಲ್ಲಿ ಹೊಸ ನೀರು ಹರಿದಂತಾಗಿತ್ತು ನಿಜ. ಆದರೆ ಅದು ಕೊಳೆಯನ್ನು ಕೊಚ್ಚಿಕೊಂಡು ಹೋಗುವುದರ ಜೊತೆಗೆ ಈ ರಾಷ್ಟ್ರದ ಜೀವಾಳವಾದ ಧರ್ಮದ ಗಟ್ಟಿತನವನ್ನೇ ಕೆಣಕುತ್ತಿತ್ತು. ಈ ದೇಶದ ಇತಿಹಾಸದಲ್ಲಿ ಹಿಂದೆ ಆದಂತೆ ರಾಷ್ಟ್ರೀಯ ಚೇತನ ಒಂದು ಹೊಸಹುಟ್ಟಿಗೆ ಅಣಿಯಾಗುತ್ತಿತ್ತು. ಇಂತಹ ಸನ್ನಿವೇಶದಲ್ಲಿಯೇ ಧರ್ಮಗಳ ಚೈತನ್ಯದಾಯಕ ಜೀವಂತ ಶಕ್ತಿಯನ್ನು ಪುನರುಜ್ಜೀವನ ಗೊಳಿಸಲು ಶಕ್ತಿಸಮುದ್ರದಿಂದ ಒಂದು ಅದ್ಭುತ ತರಂಗವೇ ಮೈತಳೆದಂತಿದ್ದ ಯುಗಪುರುಷನ ಆಗಮನವನ್ನು ನಿರೀಕ್ಷಿಸುತ್ತಿತ್ತು.



**ಶಕ್ತಿಸಮುದ್ರದಿಂದ ಒಂದು ಅದ್ಭುತ ತರಂಗವೇ ಮೈತಳೆದಂತಿದ್ದ ಯುಗ ಪುರುಷ**

## ಶ್ರೀರಾಮಕೃಷ್ಣರು ಮತ್ತು ಆಧ್ಯಾತ್ಮದ ವಸಂತಕಾಲ

೧೮೩೬ ಫೆಬ್ರುವರಿ ೧೮ರಂದು ಹುಟ್ಟಿದ ಶ್ರೀರಾಮಕೃಷ್ಣರು ಬಾಲ್ಯದಿಂದಲೇ ಪರಮಸತ್ಯಕ್ಕಾಗಿ ತೀವ್ರವಾದ ಹಂಬಲವುಳ್ಳವರಾಗಿದ್ದರು. ಪ್ರಾಪಂಚಿಕ ಪ್ರವಣತೆಯಿಂದ ಶೂನ್ಯವಾಗಿದ್ದ ಅವರ ಅಂತರಂಗವನ್ನು ದಿನ ಕಳೆದಂತೆ ಪರಮ ಸತ್ಯಕ್ಕಾಗಿನ ದಾಹ ಆವರಿಸಿತ್ತು. ಹೀಗಾಗಿ ಅವರು ಬಾಲ್ಯದಿಂದಲೇ ಯಾವುದೇ ಗೊಡ್ಡು ಕಂದಾಚಾರ ಬಾಹ್ಯಾಡಂಬರಗಳ

ಗೋಜಿಲ್ಲದೆ ಮುಕ್ತವಾದ ಮನಸ್ಸಿನಿಂದ ಬೆಳೆದು ತಾರುಣ್ಯದ ಹೊಸ್ತಿಲಿನಲ್ಲಿರುವಾಗಲೇ ಪರಮ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡರು. ಪ್ರಯೋಗಶೀಲವಾದ ಅವರ ಮನಸ್ಸು ಪರಮಸತ್ಯವನ್ನು ಅದರ ಎಲ್ಲ ವೈವಿಧ್ಯತೆಯಲ್ಲಿ ಸಾಕ್ಷಾತ್ಕರಿಸಿಕೊಳ್ಳುವ ಹಂಬಲದಿಂದ ಪ್ರತಿಯೊಂದು ಧರ್ಮದ ಸಾಧನೆಯಲ್ಲೂ ತೊಡಗಿತು. ಸ್ವಾಮಿ ವಿವೇಕಾನಂದರು ಹೇಳುವ ಹಾಗೆ 'ಯುಗ ಯುಗಗಳ ಸಮಸ್ತ ಧಾರ್ಮಿಕ ಅನುಭೂತಿಗಳನ್ನು ಪ್ರತಿಯೊಂದು ಸಂಪ್ರದಾಯ ಸಾಧನೆಯನ್ನೂ ಅವರು ತಮ್ಮ ಒಂದೇ ಜೀವನದಲ್ಲಿ ಮಾಡಿ ಪಡೆದು, ಅವುಗಳಲ್ಲಿ ಸತ್ಯವನ್ನು ಅನುಭವಿಸಿ ಕೊನೆಗೆ ಈ ಎಲ್ಲ ವೈವಿಧ್ಯತೆಗಳ ಹಿಂದಿರುವ ಏಕತೆಯನ್ನೂ, ಎಲ್ಲ ವೈವಿಧ್ಯತೆಗಳೂ ಹೇಗೆ ಪರಮ ಚೈತನ್ಯದಲ್ಲಿ ಸಮನ್ವಯಗೊಳ್ಳುತ್ತವೆ ಎಂಬುದನ್ನೂ ಅನುಭವಿಸಿದರು, ಇತಿಹಾಸದಲ್ಲಿ ಅಷ್ಟೇನೂ ಅಂತರವಿಲ್ಲದ ೧೯ನೆ ಶತಮಾನದಲ್ಲಿಯಷ್ಟೇ ಮನುಷ್ಯರ ಮಧ್ಯೆ ಮನುಷ್ಯರಾಗಿ ಬದುಕಿ, ಅನಿತ್ಯವಾದ ಪ್ರಪಂಚದಲ್ಲಿ ನಿತ್ಯತೆಯ ಕಂಪನ್ನು ಸೂಸುತ್ತಾ ತಾವು ಪಡೆದ ಅನುಭೂತಿಯನ್ನು ಜಗತ್ತು ಗುರುತಿಸಬಹುದಾದ ರೀತಿಯಲ್ಲಿ ಒಂದು ಅದ್ಭುತವೆನ್ನುವ ಬಾಳನ್ನು ನಡೆಸಿದರು.

## ಸ್ವಾಮಿ ವಿವೇಕಾನಂದರು ಮತ್ತು ಆಧ್ಯಾತ್ಮ ಸಂಪತ್ತಿನ ವಿತರಣೆ

ಶ್ರೀರಾಮಕೃಷ್ಣರ ಅಂತರಂಗ ಶಿಷ್ಯರಲ್ಲಿ ಪ್ರಮುಖರಾದವರು ಸ್ವಾಮಿ ವಿವೇಕಾನಂದರು. ಶ್ರೀರಾಮಕೃಷ್ಣರ ಬದುಕು ಮತ್ತು ಸಂದೇಶಗಳ ಸಾರ್ವತ್ರಿಕ ಮಹತ್ತ್ವ ಜಗತ್ತಿಗೆ ತಿಳಿದುದು ಸ್ವಾಮಿ ವಿವೇಕಾನಂದರ (ಸ್ವಾಮೀಜಿಯವರ) ಪ್ರಯತ್ನದಿಂದಲೇ. ತಮ್ಮ ಕಠೋರ ಸಾಧನೆಯಿಂದ ಹಾಗೂ ತಮ್ಮ ಗುರುದೇವರ ಕೃಪೆಯಿಂದ ಪರಮ ದೈವತ್ವದ ಅನುಭೂತಿಯನ್ನು ಪಡೆದುದೇ ಅಲ್ಲದೆ ಅದೇ ದೈವತ್ವ ಪ್ರತಿಯೊಂದು ಜೀವಿಯಲ್ಲಿಯೂ ಅಧಿಷ್ಠಾನವಾಗಿರುವುದನ್ನು ಕಂಡು ಇಂತಹ ಪ್ರತ್ಯಕ್ಷ ದೇವರ ಸೇವೆಯೆ ಭಗವಂತನ ಪರಮೋತ್ಕೃಷ್ಟವಾದ ಪೂಜೆ ಎಂದು ಜಗತ್ತಿಗೆ ಸಾರಿದರು. ಅವರ ಮಾತಿನಲ್ಲಿಯೇ ಹೇಳುವುದಾದರೆ, 'ನನ್ನ ಆದರ್ಶವನ್ನು ಕೆಲವೇ ಪದಗಳಲ್ಲಿ ವಿವರಿಸಬಹುದು : ಮಾನವ ಜನಾಂಗಕ್ಕೆ ಅವರ ದೈವಿಕತೆಯನ್ನೂ ಅವರ ಜೀವನದ ಪ್ರತಿಯೊಂದು ಚಲನವಲನದಲ್ಲೂ ಹೇಗೆ ಅದನ್ನು ವ್ಯಕ್ತಗೊಳಿಸುವುದು ಎಂಬುದನ್ನೂ ಬೋಧಿಸುವುದು.'(*ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ* ೬.೬)

ಸ್ವಾಮೀಜಿಯವರಿಗೆ, ಧರ್ಮ ಮಾತ್ರವಷ್ಟೇ ಅಲ್ಲ, ಮನುಷ್ಯನ ಪ್ರಗತಿಗೆ ಸಂಬಂಧ ಪಟ್ಟ ಪ್ರತಿಯೊಂದರಲ್ಲೂ ಆಸಕ್ತಿಯಿತ್ತು. ವಿಜ್ಞಾನ, ಕಲೆ, ಸಾಹಿತ್ಯ, ಇತಿಹಾಸ, ಸಮಾಜಶಾಸ್ತ್ರ, ರಾಜನೀತಿ—ಪ್ರತಿಯೊಂದರಲ್ಲೂ ಅವರ ಆಳವಾದ ಅಧ್ಯಯನ ಹಾಗೂ ಈ ವಿಷಯಗಳಲ್ಲಿ ಕ್ರಾಂತಿಕಾರಿ ಎನ್ನಬಹುದಾದ ಅವರ ಒಳನೋಟಗಳಂತೂ ವಿಚಾರವಂತರ ಮನಸ್ಸನ್ನು ಬಡಿದೆಬ್ಬಿಸುತ್ತವೆ. ಮನುಷ್ಯನ ಎಲ್ಲ ಕ್ರಿಯಾತ್ಮಕ ಹೋರಾಟಗಳಲ್ಲಿಯೂ ಅವನ ನೈಜಸ್ವರೂಪವಾದ ದೈವತ್ವದ ಮತ್ತು ಮುಕ್ತಿಯ ಅಭಿವ್ಯಕ್ತಿಯನ್ನೇ ಕಾಣುತ್ತಿದ್ದ ಅವರಿಗೆ ವ್ಯಾವಹಾರಿಕ ಮತ್ತು ಪಾರಮಾರ್ಥಿಕಗಳ ನಡುವಿನ ಅಂತರ ಕರಗಿ ಹೋಗಿತ್ತು. ಸೋದರಿ ನಿವೇದಿತೆಯವರು ಅವರ ಕೃತಿಗಳ ಬಗ್ಗೆ ಮುನ್ನುಡಿಯಲ್ಲಿ ಈ ರೀತಿ ಬರೆಯುತ್ತಾರೆ: 'ವೈವಿಧ್ಯತೆ ಮತ್ತು ಏಕತೆಗಳೆರಡು ಒಂದೇ ಪರಮಸತ್ಯದ ವಿಭಿನ್ನವಾದ ಅಭಿವ್ಯಕ್ತಿಯೆಂದಾದರೆ ಕಲೆ, ವಿಜ್ಞಾನ ಮತ್ತು ಧರ್ಮ ಇವೆಲ್ಲವೂ ಆ ತತ್ತ್ವವನ್ನು ತಲುಪುವ ವಿಭಿನ್ನ ದಾರಿಗಳಷ್ಟೇ. ಕಾಯಕ ಮತ್ತು ಪ್ರಾರ್ಥನೆ ಎರಡೂ ಒಂದೇ, ತನ್ನನ್ನು ಗೆಲ್ಲುವುದೇ ತ್ಯಾಗ. ಜೀವನವೇ ಧರ್ಮ. ದೇವರನ್ನು ಸಂಧಿಸಲು ದೇವಸ್ಥಾನದ ಬಾಗಿಲು ಅಥವಾ ಸಂನ್ಯಾಸಿಯ ಧ್ಯಾನದ ಕೋಣೆ ಹೇಗೆ ಯೋಗ್ಯವೋ ಹಾಗೆಯೇ ಕಾರ್ಯಕ್ಷೇತ್ರ, ಅಧ್ಯಯನ ಕೊಠಡಿ, ತೋಟ, ಹೊಲ, ಮುಂತಾದುವೆಲ್ಲವೂ ಸಹ ತಪೋಯೋಗ್ಯವಾದ ವಾತಾವರಣವೇ.'(*ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ* ೧.ixx)

ದೇವರನ್ನು ಸಂಧಿಸಲು ದೇವಸ್ಥಾನದ ಬಾಗಿಲು ಅಥವಾ ಸಂನ್ಯಾಸಿಯ ಧ್ಯಾನದ ಕೋಣೆ ಹೇಗೆ ಯೋಗ್ಯವೋ ಹಾಗೆಯೇ ಕಾರ್ಯಕ್ಷೇತ್ರ, ಅಧ್ಯಯನ ಕೊಠಡಿ, ತೋಟ, ಹೊಲ, ಮುಂತಾದುವೆಲ್ಲವೂ ಸಹ ತಪೋಯೋಗ್ಯವಾದ ವಾತಾವರಣವೇ.

ಮೇಲಿನ ವಾಕ್ಯಗಳು ಧರ್ಮದ ಜೀವಂತಶಕ್ತಿಯನ್ನು ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಕಾಣಬಹುದಾದ ಸಾಧ್ಯತೆಯನ್ನು ತೋರುತ್ತವೆ. ಧರ್ಮ, ಅದು ನಿಜವಾದ ಧರ್ಮವಾದರೆ, ವ್ಯಾವಹಾರಿಕವಾಗಿರಲೇಬೇಕು ಎಂಬುದು ಸ್ವಾಮೀಜಿಯವರ ನಿಲುವು. ಎಂದೋ ಮುಂದೆ ದೊರಕಬಹುದಾದ ಸುಖ, ಸ್ವರ್ಗಪ್ರಾಪ್ತಿಗಾಗಿ ಅಲ್ಲ: ಇಲ್ಲಿ, ಈಗ ಬದುಕಿನ ಪ್ರತಿಯೊಂದು ಕ್ಷಣದಲ್ಲೂ ಆನಂದ, ಶಾಂತಿ, ಸ್ವಾತಂತ್ರ್ಯವನ್ನು ನಾವು ಅನುಭವಿಸುವಂತಾಗಬೇಕು.

## ಪೌರ್ವಾತ್ಯ ಮತ್ತು ಪಾಶ್ಚಾತ್ಯಮೌಲ್ಯಗಳ ಪರಸ್ಪರ ವಿನಿಮಯ

ಸರ್ವಾತ್ಮಭಾವದಿಂದ ತುಂಬಿತುಳುಕುತ್ತಿದ್ದ ಸ್ವಾಮೀಜಿಯವರಿಗೆ ಜಗತ್ತಿನ ಯಾವುದೇ ಮೂಲೆಯಲ್ಲಿ ದುರ್ಘಟನೆ ಸಂಭವಿಸಿದರೂ ಅದು ತಮಗೇ ಆದ ಆಘಾತವೆಂಬ ಅನುಭವವಾಗುತ್ತಿತ್ತು. ಭಾರತವನ್ನು ಅದರ ಆಧ್ಯಾತ್ಮಪರಂಪರೆಗೆ ಅದೆಷ್ಟು ಪ್ರೀತಿಸುತ್ತಿದ್ದರೂ, ಇಲ್ಲಿ ಕಿತ್ತು ತಿನ್ನುತ್ತಿರುವ ಬಡತನ, ದಾರಿದ್ರ್ಯ, ಜನಸಾಮಾನ್ಯರ ಬವಣೆ ಅವರ ಬದುಕಿನುದ್ದಕ್ಕೂ ಅವರನ್ನು ತೀವ್ರವಾಗಿ ಬಾಧಿಸುತ್ತಿತ್ತು. ಈ ದೇಶದ ಭೌತಿಕ ಪ್ರಗತಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಆವಶ್ಯಕತೆಯನ್ನು ಅವರು ಮನಗಂಡಿದ್ದರು. ಪಾಶ್ಚಿಮಾತ್ಯರ ಉತ್ಪಾದನಾದಕ್ಷತೆ ಮತ್ತು ತಾಂತ್ರಿಕ ಕೌಶಲ್ಯಗಳನ್ನು ಅಳವಡಿಸಿಕೊಂಡು ಈ ದೇಶದಲ್ಲಿನ ಜನಸಾಮಾನ್ಯರ ಜೀವನಮಟ್ಟವನ್ನು ಉತ್ತಮಗೊಳಿಸುವ ಕಳಕಳಿ ಅವರಲ್ಲಿ ಎದ್ದು ಕಾಣುತ್ತಿತ್ತು.

ಆದರೆ ಪಾಶ್ಚಾತ್ಯರ ಅಂತರಂಗವನ್ನು ಒಳಹೊಕ್ಕು ನೋಡಿದ್ದ ಅವರ ಪ್ರತಿಭಾನಚಕ್ಷುಗಳಿಗೆ ಪಾಶ್ಚಾತ್ಯರ ದೋಷದೌರ್ಬಲ್ಯಗಳು ಸ್ಪಷ್ಟವಾಗಿ ಕಾಣಿಸುತ್ತಿದ್ದವು. ಎಲ್ಲೆ ಇಲ್ಲದ ಭೋಗಲಾಲಸೆಯು ನೈತಿಕ ಮತ್ತು ಆಧ್ಯಾತ್ಮಿಕ ಸೂಕ್ಷ್ಮತೆಗಳನ್ನು ಮಂಕಾಗಿಸಿ ಪಾಶ್ಚಾತ್ಯರ ಬದುಕನ್ನು ಹೇಗೆ ದುರ್ಭರಗೊಳಿಸುತ್ತಿತ್ತು ಎಂದು ಅವರ ಜೀವನವನ್ನು ಹತ್ತಿರದಿಂದ

> **ಮ**ನುಷ್ಯನ ನೈಜಸ್ವರೂಪವಾದ ದೈವತ್ವದ ಅನುಭವ ಸಾಧ್ಯವಾಗಿಸಬಲ್ಲ ಅಧ್ಯಾತ್ಮ ದರ್ಶನವೊಂದೇ ಪಾಶ್ಚಾತ್ಯರ ಜೀವನದಲ್ಲಿ ಒಂದು ಹೊಸ ಅಧ್ಯಾಯ ವನ್ನು ತೆರೆಯುತ್ತದೆ

ನೋಡಿದ್ದ ಸ್ವಾಮೀಜಿಯವರಿಗೆ ತಿಳಿದಿತ್ತು. ಪಾಶ್ಚಿಮಾತ್ಯರ ವೈಭವದ ಬಾಹ್ಯಾಡಂಬರದ ಮುಸುಕಿನ ಮರೆಯಲ್ಲಿ ಅಡಗಿದ್ದ ಆಳವಾದ ದುಃಖ ಮತ್ತು ಯಾತನೆ—ಅವರಲ್ಲಿದ್ದ ಪ್ರವಾದಿಯನ್ನು ಎಚ್ಚರಿಸಿತ್ತು. ಮನುಷ್ಯನ ನೈಜಸ್ವರೂಪವಾದ ದೈವತ್ವದ ಅನುಭವ ಸಾಧ್ಯವಾಗಿಸಬಲ್ಲ ಅಧ್ಯಾತ್ಮದರ್ಶನವೊಂದೇ ಪಾಶ್ಚಾತ್ಯರ ಜೀವನದಲ್ಲಿ ಒಂದು ಹೊಸ ಅಧ್ಯಾಯವನ್ನು ತೆರೆಯುತ್ತದೆ ಎಂಬ ದೃಢವಾದ ನಂಬಿಕೆಯಿಂದ ಆ ಅನುಭೂತಿಗೆ ಬೇಕಾದ ಸಾಧನೆಯ ರೂಪುರೇಖೆಗಳನ್ನು ನಿರೂಪಿಸು ವುದರಲ್ಲಿ ಕಾರ್ಯಪ್ರವೃತ್ತರಾದರು. ಇದರ ಪರಿಣಾಮವಾಗಿಯೇ, ಈಗ ಸ್ವಾಮೀಜಿಯವರ ನಾಲ್ಕು ಯೋಗಗಳು ಗ್ರಂಥಗಳ ರೂಪದಲ್ಲಿ ಹೊರಬಿದ್ದು ಅತ್ಯಂತ ಪ್ರಸಿದ್ಧವಾಗಿವೆ.

ಪಾಶ್ಚಾತ್ಯ ಸಂಸ್ಕೃತಿಯ ಭೌತಿಕ ಸೌಕರ್ಯಗಳ ಸಲಕರಣೆಗಳು ಭಾರತಕ್ಕೆ ಹೇಗೆ ಆವಶ್ಯಕವೋ, ಭಾರತದ ಆಧ್ಯಾತ್ಮಿಕ ಭಾಗ್ಯದ ಸಿರಿಯನ್ನು ಪಶ್ಚಿಮಕ್ಕೆ ತಲುಪಿಸುವುದು ಅಷ್ಟೇ ಆವಶ್ಯಕವೆಂದರು ಸ್ವಾಮೀಜಿ. ಆಧುನಿಕ ಪ್ರಪಂಚದ ಪ್ರಗತಿಪರವಾದ ಪ್ರತಿಯೊಂದು ಬೆಳವಣಿಗೆಗೂ ಮುಕ್ತವಾದ ಔದಾರ್ಯತೆಯ ಮನೋಭಾವವನ್ನು ರೂಢಿಸಿಕೊಳ್ಳ ಬೇಕೆಂದರು.

### ವಿಶ್ವಧರ್ಮದ ಆದರ್ಶ: ಈ ಯುಗದ ಮತ್ತೊಂದು ಆವಶ್ಯಕತೆ

ವಿಶ್ವದ ಪರ್ಯಟನ ಮತ್ತು ಪಾಶ್ಚಿಮಾತ್ಯರ ಧಾರ್ಮಿಕ ವಿಚಾರಗಳ ಸತತ ಪರಿಶೀಲನ—ಇವುಗಳಿಂದ ವಿಶ್ವಧರ್ಮದ ಆದರ್ಶ ಸ್ವಾಮೀಜಿ ಯವರಲ್ಲಿ ಪರಿಪಕ್ವವಾಗಿತ್ತು. ಧರ್ಮ ಪ್ರಗತಿಪರವಾದುದು. ನಾನಾ ಧರ್ಮಗಳಲ್ಲಿರುವ ವಿಧ ವಿಧ ವಿಚಾರಗಳ ಸತತ ವಿನಿಮಯವಾಗಿ ವಿಚಾರ ವಾಹಿನಿ ಅವ್ಯಾಹತವಾಗಿ ಹರಿದು ಅದರಲ್ಲಿ ಮಾನವನು ಮೀಯುತ್ತಾ ಮುಂದೆ ಸಾಗಬೇಕೆಂಬುದೇ ಸ್ವಾಮೀಜಿಯವರ ವಿಶ್ವಧರ್ಮದ ಆದರ್ಶವಾಗಿತ್ತು. ಮನುಕುಲದ ಕಲ್ಯಾಣಕ್ಕೆ ಸಾಹಚರ್ಯ ಮತ್ತು ಸಹ ಬಾಳ್ವೆಯ ತತ್ತ್ವಗಳ ಮೇಲೆ ನಿಂತಿರುವ ಸ್ವಾಮೀಜಿಯವರ ವಿಶ್ವ ಧರ್ಮದ ಆದರ್ಶ ನಿಸ್ಸಂದೇಹವಾಗಿ ಅತ್ಯಂತ ಶ್ರೇಷ್ಠವಾದುದು. ಅವರ ವಿಶ್ವಧರ್ಮದ ಆದರ್ಶದಲ್ಲಿ ಪರಸ್ಪರ ವಿಚಾರವಿನಿಮಯದಿಂದ ಪ್ರತಿ ಯೊಂದು ಧರ್ಮದಲ್ಲೂ ಹೊಸರಕ್ತ ಹರಿದಂತಾಗಿ, ತ್ರಾಣ ಹೆಚ್ಚಿ ದಂತಾಗಿ ಒಂದಕ್ಕೊಂದು ಪೂರಕವಾಗುತ್ತವೆ. ವಿಶ್ವದ ಜೀವಾಳ ವಿರುವುದೇ ಬಹುರೂಪತೆಯಲ್ಲಿ. ಪ್ರತಿಯೊಂದು ಧಾರ್ಮಿಕಪರಂಪರೆ ಗೂ ತನ್ನದೇ ಸಂಗೀತ ತನ್ನದೇ ಆದ ದೃಷ್ಟಿಕಿಂಡಿಯಿದೆ. ಈ ಕಿಂಡಿಯ ಮೂಲಕ ವಿಶ್ವಸಂವೇದನೆಯನ್ನು ಅದು ತನ್ನಲ್ಲಿ ಅರಗಿಸಿಕೊಳ್ಳುತ್ತದೆ. ಅರಗಿಸಿಕೊಳ್ಳುತ್ತ ತನ್ನ ಸ್ವತಂತ್ರ ವ್ಯಕ್ತಿತ್ವವನ್ನು ಅನನ್ಯವಾಗಿ ಕಡೆದು ಕೊಳ್ಳುತ್ತದೆ.

### ಸಾಮಾಜಿಕ ಆರ್ಥಿಕ ನೀತಿ ಮತ್ತು ಜಾಗತಿಕ ಸವಾಲುಗಳು

ಈ ಉನ್ನತವಾದ ಉದಾತ್ತ ಆಧ್ಯಾತ್ಮಿಕ ಆದರ್ಶಗಳೆಲ್ಲ ಕ್ರಿಯಾಶೀಲವಾಗುವ ಅವಕಾಶ ವಿರುವಲ್ಲಿ ಮಾತ್ರವೇ ಹಿತವಾದ ಸಾಮಾಜಿಕ ಬದಲಾವಣೆಗಳು ಸಾಧ್ಯ ಎಂಬುದು ಸ್ವಾಮೀಜಿ ಯವರ ಸ್ಪಷ್ಟವಾದ ನಿಲುವು. ಪ್ರಸಕ್ತ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳನ್ನು ಅವಲೋಕಿಸಿದಾಗ ಇಂದು ಆಧುನಿಕ ತಂತ್ರಜ್ಞಾನ ಮತ್ತು ಆರ್ಥಿಕ ರಂಗದಲ್ಲಿ ಪಶ್ಚಿಮ ರಾಷ್ಟ್ರಗಳು ಸಾಧಿಸಿರುವ ಪ್ರಗತಿಯಿಂದಾಗಿ ಎಲ್ಲ ರಾಷ್ಟ್ರಗಳೂ ಆಕರ್ಷಿತ ವಾಗಿವೆ. ಭಾರತವೂ ಇದಕ್ಕೆ ಹೊರತಲ್ಲ. ಇಂದು ಹೆಚ್ಚು ಹೆಚ್ಚಾಗಿ ಕೇಳಿಬರುತ್ತಿರುವ ಜಾಗತೀಕರಣ, ಉದಾರೀಕರಣದ ಫಲಶ್ರುತಿ ಒಂದು ರೀತಿಯ ಪಾಶ್ಚಾತ್ಯ ಸಂಸ್ಕೃತಿಯ ಆಕ್ರಮಣಕ್ಕೆ ದಾರಿ ಮಾಡಿಕೊಡುತ್ತಿದೆ ಯೇನೋ ಎಂಬ ಗುಮಾನಿ ಅನೇಕ ವಲಯಗಳಲ್ಲಿವೆ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಶ್ರೀಮಂತ ದೇಶಗಳ ಶಕ್ತಿ ಮತ್ತು ಪ್ರಭಾವ ಹೆಚ್ಚು ಎಂಬುದು ರಹಸ್ಯವಾಗೇನೂ ಉಳಿದಿಲ್ಲ. 'ಮುಕ್ತ ಮಾರುಕಟ್ಟೆ'ಯ ವಾಣಿಜ್ಯ ಧೋರಣೆಗಳು ಆ ಶ್ರೀಮಂತ ರಾಷ್ಟ್ರಗಳ ಮಟ್ಟಿಗೆ ಸೂಕ್ತವಾಗಿಯೇನೊ ಇರಬಹುದು. ಇಂದು ಮನುಷ್ಯನನ್ನೂ ಸರಕೆಂದು ಭಾವಿಸುವ ಗ್ರಾಹಕ ಸಂಸ್ಕೃತಿ (*consumerist culture*) ವ್ಯಾಪಕ ವಾಗಿದೆ. ಜಾಗತೀಕರಣದ ವಾಣಿಜ್ಯ ಧೋರಣೆಯನ್ನೂ ಹಾಗೂ ಅದರ ಅಪಾಯಗಳನ್ನೂ ಇತ್ತೀಚಿನ ವಿಶ್ವಸಂಸ್ಥೆಯ ವರದಿಯು ಗುರುತಿಸುತ್ತದೆ. ವಿಶ್ವಸಂಸ್ಥೆಯ ಯುನೈಟೆಡ್ ನೇಷನ್ ಡೆವಲಪ್ ಮೆಂಟ್ ಪ್ರೋಗ್ರಾಂ (UNDP)ವೇದಿಕೆಯು ತನ್ನ ೧೦ನೆ ಮಾನವ ವಿಕಾಸ ವರದಿಯಲ್ಲಿ (*Human Development Report*) ಅತ್ಯಂತ ಉಗ್ರವಾಗಿ ಮಾನವೀಯ ಮೌಲ್ಯಗಳ ಮೇಲೆ ಒತ್ತುಕೊಡುತ್ತ **'ಜಾಗತೀಕರಣದ ನೀತಿ ನಿಯಮಗಳು ಈಗಿರುವಂತೆ ಕೇವಲ ಹಣ ಕೇಂದ್ರಿತ ಚಿಂತನೆಯಿಂದ ಹೊರಬಂದು ವ್ಯಕ್ತಿ ಕೇಂದ್ರಿತ ಚಿಂತನೆ ಯಾಗಿ ರೂಪು ಗೊಳ್ಳಬೇಕು'** ಎಂದು ಹೇಳಿದೆ.

ಆಧುನಿಕ ಭಾರತದಲ್ಲಿ **'ವ್ಯಕ್ತಿಕೇಂದ್ರಿತ'**ವಾದ ಸಾಮಾಜಿಕ-ಆರ್ಥಿಕ ಚಿಂತನೆ ನಡೆದಿರುವುದು ಸ್ವಾಮೀಜಿಯವರ ಕೃತಿಗಳಲ್ಲಿ. [ಡಾ. ಶಾಂತಿ.ಎಲ್ ಮುಖರ್ಜಿಯವರ Philosophy of Man-making: *A Study in the Socio-Political Ideas of Swami Vivekananda* ಹಾಗೂ ಸಾಂತ್ವನ ದಾಸಗುಪ್ತರವರ *Vivekananda—The Prophet of Human Emancipation* ಗ್ರಂಥಗಳನ್ನು ನೋಡಿ] ಸ್ವಾಮೀಜಿಯವರಿಗೆ ವ್ಯಕ್ತಿತ್ವವೆಂದರೆ ಉದಾರ ಮನೋಭಾವದಿಂದ ವರ್ತಿಸುವ, ಸರ್ವತೋಮುಖವಾಗಿ ಬೆಳೆದು ವಿಕಸಿಸುವ ವ್ಯಕ್ತಿತ್ವ. ಸ್ವಾಮೀಜಿಯವರು 'ಒಂದೊಂದು ವ್ಯಕ್ತಿ ಮಾತ್ರದಲ್ಲಿ ಇಡೀ ವಿಶ್ವವೇ ಹುದುಗಿಕೊಂಡಿರುವುದು... ವ್ಯಕ್ತಿತ್ವವೇ ನನ್ನ ಗುರಿ. ವ್ಯಕ್ತಿಗಳನ್ನು ತರಬೇತು ಮಾಡುವುದಕ್ಕಿಂತ ಹೆಚ್ಚಿನ ಮಹತ್ವಾ ಕಾಂಕ್ಷೆ ನನಗಿಲ್ಲ' ಎಂದು ಹೇಳಿರುವುದನ್ನು ನಾವು ಗಮನಿಸಬಹುದು. ಸ್ವಾಮೀಜಿಯವರು ತಮ್ಮ ಇಡೀ ಬದುಕಿನ ಸಾಧನೆಯನ್ನು ಬಹಳ ಮಾರ್ಮಿಕವಾಗಿ ಕೆಲವೇ ಮಾತುಗಳಲ್ಲಿ ಹೀಗೆನ್ನುತ್ತಾರೆ: 'ಈ ಎಲ್ಲ ತಪಸ್ಯೆಯ ನಂತರ ನನಗೆ ಹೊಳೆದ ನಿತಾಂತ ಸತ್ಯವು ಇದೇ: "ದೇವರು ಎಲ್ಲಾ ಜೀವಿಗಳಲ್ಲೂ ಇದ್ದಾನೆ ಮತ್ತು ಅವನಿಗಿಂತ ಬೇರೆ ದೇವರಿಲ್ಲ!